2419310/2419224

Email:gardendepartment.uom@gamil.com
www.uni.mysore.ac.in

ಮೈಸೂರು ವಿಶ್ವವಿದ್ಯಾನಿಲಯ
Estd:1916

(Re-accredited by NACC with 3.47 CGPA of 4.0 Scale)
(NIRF -2020 Ranked 27 in University Category & 47 in Overall Category)

ತೋಟಗಾರಿಕಾ ವಿಭಾಗ
ಮಾನಸಗಂಗೋತ್ರಿ,
ಮೈಸೂರು–570006

ನಂ.ಯುಜಿಡಿ/ 247 /2021-22

ದಿನಾಂಕ:24.09.2021

# ಪ್ರಕಟಣೆ

ವಿಷಯ:- 2021-22ನೇ ಸಾಲಿನ ವಿಭಾಗದ ಸೀಬೆ ಮತ್ತು ಸೀತಾಫಲ ಫಸಲನ್ನು ಟೆಂಡರ್ ಕಂ. ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ

-=-

ಸಮಸ್ತ ಜನಗಳಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಮೈಸೂರು ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ತೋಟಗಾರಿಕಾ ವಿಭಾಗದ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ ಸೀಬೆ ಮತ್ತು ಸೀತಾಫಲ ಫಸಲುಗಳ 2021-22ನೇ ಸಾಲಿನ ಟೆಂಡರ್ ಕಂ. ಬಹಿರಂಗ ಹರಾಜು ಪ್ರಕ್ರಿಯೆ ದಿನಾಂಕ **04.10.2021** *ರಂದು* ಬೆಳಗ್ಗೆ 11.00 ಗಂಟೆಗೆ ಮಾನಸಗಂಗೋತ್ರಿಯಲ್ಲಿರುವ ನರ್ಸರಿ ತೋಟದಲ್ಲಿ ಪ್ರಾರಂಭವಾಗುತ್ತದೆ. ಸದರಿ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಗಡ ಹಣ ರೂ.**2,500/-**(ಎರಡು ಸಾವಿರದ ಐನ್ನೂರು ರೂಪಾಯಿ]ಗಳ ನಗದನ್ನು ಠೇವಣಿಯನ್ನಾಗಿ ಹರಾಜು ಸ್ಥಳದಲ್ಲಿ ಪಾವತಿಸಿದ ನಂತರವೇ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡಬಹುದು. ಬಹಿರಂಗ ಹರಾಜಿನ ಯಶಸ್ವಿ ಬಿಡ್‌ದಾರರು ಪೂರ್ತಾ ಹಣವನ್ನು ಸ್ಥಳದಲ್ಲೇ ಪಾವತಿಸತಕ್ಕದ್ದು.

| | |
|---|---|
| 1. ಸೀಬೆ ಫಸಲಿನ ಮರ | 250 |
| 2. ಸೀತಾಫಲ ಫಸಲಿನ ಮರ | 90 |

ಈ ಬಗ್ಗೆ ಹೆಚ್ಚಿನ ವಿವರಗಳಿಗೆ : ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ದೂರವಾಣಿ ಸಂಖ್ಯೆ: 0821 - 2419310

ಸಹಾಯಕ ನಿರ್ದೇಶಕರು

**ಸಹಾಯಕ ನಿರ್ದೇಶಕರು**
**ತೋಟಗಾರಿಕೆ ವಿಭಾಗ**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು-570 006**

Email:gardendepartment.uom@gamil.com
www.uni.mysore.ac.in

ಮೈಸೂರು ವಿಶ್ವವಿದ್ಯಾನಿಲಯ
Estd:1916

(Re-accredited by NACC with 3.47 CGPA of 4.0 Scale)
(NIRF -2020 Ranked 27 in University Category & 47 in Overall Category)

ತೋಟಗಾರಿಕಾ ವಿಭಾಗ
ಮಾನಸಗಂಗೋತ್ರಿ,
ಮೈಸೂರು–570006

## ಸೀಬೆ ಮತ್ತು ಸೀತಾಫಲ ಫಸಲಿನ ಟೆಂಡರ್ ಕಂ ಬಹಿರಂಗ ಹರಾಜಿನ 'ಷರತ್ತುಗಳು'

1. ಸೀಬೆ ಮತ್ತು ಸೀತಾಫಲ ಫಸಲಿನ ಟೆಂಡರ್ ಕಂ. ಬಹಿರಂಗ ಹರಾಜು ಜರುಗುವ ಮುಂಚಿತವಾಗಿ ಬಿಡ್‌ದಾರರು ರೂ.2,500–[ಎರಡು ಸಾವಿರದ ಐನ್ನೂರು ರೂಪಾಯಿ] ಇ.ಎಂ.ಡಿ. ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು.

2. ಹರಾಜಿನಲ್ಲಿ ಅಂತಿಮ ಬಿಡ್ ಮಾಡಿದವರು ಸ್ಥಳದಲ್ಲೇ ಪೂರ್ತಾ ಹಣವನ್ನು ಸಂದಾಯ ಮಾಡತಕ್ಕದ್ದು.

3. ಸದರಿ ಹರಾಜಿಗೆ ಸಂಬಂಧಪಟ್ಟ ಮರಗಳ ಫಸಲನ್ನು ಕೀಳುವಾಗ ಯಾವುದೇ ಮರಗಳಿಗಾಗಲೀ ಅಥವಾ ವಿಶ್ವವಿದ್ಯಾನಿಲಯದ ಇನ್ನಾವುದೇ ಆಸ್ತಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು.

4. ಬಹಿರಂಗ ಹರಾಜಿನ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ನಿರ್ಧಾರವೇ ಅಂತಿಮವಾಗಿರುತ್ತದೆ.

5. ಹರಾಜಿನಲ್ಲಿ ಫಸಲುಗಳನ್ನು ತೆಗೆದುಕೊಂಡವರು, ಅನುಮತಿ ಪಡೆದ ನಂತರ ಸದರಿ ಬಿಡ್ ಮಾಡಿದ ಫಸಲುಗಳು ಹರಾಜು ಜರುಗಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಒಳಪಟ್ಟಿರುತ್ತದೆ.

6. ಯಶಸ್ವಿ ಬಿಡ್‌ದಾರರು ಭಾವಚಿತ್ರ [ಫೋಟೊ]ವುಳ್ಳ 'ಗುರುತಿನ ಚೀಟಿ' (ಆಧಾರ ಕಾರ್ಡ್ ಪ್ರತಿ) ಯನ್ನು ನೀಡತಕ್ಕದ್ದು.

7. ಬಿಡ್‌ದಾರರು ಸೀಬೆ ಮತ್ತು ಸೀತಾಫಲ ಫಸಲಿನ ಹರಾಜನ್ನು ಬೇರೆಯವರಿಗೆ ಪರಭಾರೆ ಮಾಡುವ ಹಾಗಿಲ್ಲ

8. ರೂ.200/–ಗಳ ಛಾಪಾ ಕಾಗದದಲ್ಲಿ ಕರಾರು ಪತ್ರ ಬರೆದುಕೊಡುವುದು

9. ಕಪ್ಪು ಪಟ್ಟಿಯಲ್ಲಿ ಸೇರಿರುವಂತಹವರು ಬಿಡ್‌ನಲ್ಲಿ ಭಾಗವಹಿಸುವಂತಿಲ್ಲ.

10. ಹೆಚ್ಚಿನ ವಿವರಗಳಿಗೆ:– ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ (ಕಚೇರಿ ವೇಳೆಯಲ್ಲಿ) ಖುದ್ದಾಗಿ ಸಂಪರ್ಕಿಸಬಹುದು.

ಸಹಾಯಕ ನಿರ್ದೇಶಕರು
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 006